ನಿಖರ ಮಾಹಿತಿ ಮಾತ್ರ ಸಿಗಲಿಲ್ಲ. ಅಂದಿನಿಂದ ಬಂದರ್–ಎ–ಅಬ್ಬಾಸ್ ನೋಡುವಾಗ ಡಾಲ್ಫಿನ್ನುಗಳೂ ಕಂಡೀತೋ ಎಂದು ನೋಡಲು ಶುರುಮಾಡಿದ ಆತ.

★★★

ಚಂದ್ರಕಾಂತನ ಡ್ರೈವಿಂಗ್ ಕೋಚ್ ಮೊಹಮ್ಮದ ಖಲೀಲ್ ಕಸಬಾದ ಲೋಕಲ್ ಮನುಷ್ಯ. ಕ್ಲಾಸು ಶುರುಮಾಡಿದ ತಿಂಗಳೊಪ್ಪತ್ತಿನಲ್ಲಿ ಚಂದ್ರಕಾಂತನೊಡನೆ ಆಪ್ತನಾಗಿದ್ದ. ಆಪ್ತನೆಂದರೆ ತನ್ನ ರಾಜಕೀಯ ಇನ್ಕ್ಲಿನೇಷನ್ನುಗಳನ್ನು ಕೂಡ ಹಂಚಿಕೊಳ್ಳುವಷ್ಟು. ಕಸಬಾ ದುಬಾಯಿಗೆ ಸೇರಿದರೆ ಒಳ್ಳೆಯದೆನ್ನುವ ತನ್ನ ಅಭಿಮತವನ್ನು ಡ್ರೈವಿಂಗ್ ಕಲಿಸುವ ಸಂದರ್ಭದಲ್ಲಿ ಆಗಾಗ ಪ್ರಸ್ತಾಪಿಸುತ್ತಿದ್ದ. “ಇಲ್ಲಿಯ ಸಮುದ್ರ ತಟ ಎಷ್ಟು ಸುಂದರವಾಗಿದೆ ನೋಡು, ಆದರೂ ಇದನ್ನು ಒಳ್ಳೆಯ ಪ್ರವಾಸೀ ತಾಣವನ್ನಾಗಿ ಅಭಿವೃದ್ಧಿ ಪಡಿಸಿಲ್ಲ ಈ ಸರಕಾರ... ಇದೇ ದುಬಾಯಿಯ ಕೈಯ್ಯಲ್ಲಿ ಸಿಗಬೇಕಿತ್ತು” ಅನ್ನುತ್ತಿದ್ದ. “ನಮ್ಮ ರಾಜನಿಗೆ ಎಂಬತ್ತಾಯಿತು, ಇನ್ನೂ ಅಧಿಕಾರದಲ್ಲಿ ಮುಂದುವರಿಯುವ ಚಪಲ” ಎಂದು ಮೂದಲಿಸುತ್ತಿದ್ದ. ಅಲ್ಲಿಯ ರಾಜಕೀಯ ಸೂಕ್ಷ್ಮಗಳನ್ನು ಬಲ್ಲ ಚಂದ್ರಕಾಂತ ಮಾತ್ರ ಆತನ ಮಾತುಗಳಿಗೆ ಯಾವುದೇ ಪ್ರತಿಕ್ರಿಯೆ ನೀಡಲು ಹೋಗುತ್ತಿರಲಿಲ್ಲ. ಖಲೀಲ ನಿಜವಾಗಿಯೂ ರಾಜವಿರೋಧಿಯೋ ಅಥವಾ ಸರಕಾರದ ಗೂಢಾಚಾರನೋ ಎಂಬ ಸಂಶಯ ಚಂದ್ರಕಾಂತನಲ್ಲಿ ಇದ್ದೇ ಇತ್ತು. ತಾನು ಏನೂ ಹೇಳಲು ಹೋಗಿ ಸಿಕ್ಕಿಹಾಕಿಕೊಳ್ಳಬಾರದೆಂಬ ಅರಿವಿತ್ತು. ಆದರೆ ಖಲೀಲನ ನಿಲುವುಗಳನ್ನು ತಿಳಿಯುವ ಸಣ್ಣ ಕುತೂಹಲವೂ ಇತ್ತು. ಹೀಗಾಗಿ ಅದುಇದು ಪರೋಕ್ಷ ಪ್ರಶ್ನೆಗಳನ್ನು ಕೇಳುತ್ತಾ ಖಲೀಲ ಆ ವಿಷಯದ ಬಗ್ಗೆ ಮಾತನಾಡಲು ಪುಲಾಯಿಸುತ್ತಿದ್ದ.

ಆದಿನ ರಜೆಯಾದ್ದರಿಂದ ಬೆಳಗಿನ ಹೊತ್ತೇ ಡ್ರೈವಿಂಗ್ ಕ್ಲಾಸಿಗೆ ಹೋಗಿದ್ದ ಚಂದ್ರಕಾಂತ. ಕ್ಲಾಸು ಮುಗಿಸಿ ಮಾಮೂಲಿ ಇಳಿದುಕೊಳ್ಳುವ ಜಾಗದಲ್ಲಿ ಕಾರಿನಿಂದ ಇಳಿಯುತ್ತಿರುವಂತೆಯೇ ಹಿಂದಿನಿಂದ ಪೊಲೀಸ್ ಜೀಪೊಂದು ಬಂದು ನಿಂತಿತು. ಅದರಿಂದಿಳಿದ ಎರಡು ಪೊಲೀಸರು ನೇರವಾಗಿ ಚಂದ್ರಕಾಂತನೆಡೆಗೆ ಬಂದು “ನಡೆ... ನಡೆ...” ಎನ್ನುತ್ತಾ ರಟ್ಟೆಯನ್ನು ಜೋರಾಗಿ ಎಳೆದು ಜೀಪಿನತ್ತ ಕರೆದೊಯ್ದರು. ಈ ಅಚಾನಕ್ ಘಟನೆಗೆ ಕಂಗಾಲಾದ ಚಂದ್ರಕಾಂತ, ‘ಯಾಕೆ, ಏನಾಯ್ತು?’ ಎನ್ನುತ್ತಾ ಸಹಾಯಕ್ಕಾಗಿ ಅತ್ತಿಂದಿತ್ತ ನೋಡಿದ. ಖಲೀಲ ಆಗಲೇ ಕಾರಿನೊಂದಿಗೆ ಜಾಗದಿಂದ ನಾಪತ್ತೆಯಾಗಿದ್ದ.

ಪೊಲೀಸ್ ಜೀಪಲ್ಲಿ ಕುಳಿತ ಚಂದ್ರಕಾಂತ ತನಗೆ ಬರುವ ಅರೆಬರೆ ಅರೇಬಿಕ್ ಭಾಷೆಯಲ್ಲಿ, “ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವಿರಿ? ನನ್ನಿಂದೇನು ತಪ್ಪಾಗಿದೆ?” ಎಂದು ಕೇಳಿದ. ಇಂಗ್ಲಿಷಿನಲ್ಲಿ ಮಾತನಾಡಿದರೆ ಅಲ್ಲಿಯ ಪೊಲೀಸರಿಗೆ ಕೋಪ ಬರುತ್ತದೆ ಎಂಬುದು ಅವನಿಗೆ ಗೊತ್ತಿತ್ತು. ಪೊಲೀಸರು ಕೊಟ್ಟ ಉತ್ತರ ಈತನಿಗೆ ಸರಿಯಾಗಿ ಅರ್ಥವಾಗಲಿಲ್ಲ. “ಹೇಳ ಬೇಕಾದಾಗ ಹೇಳುತ್ತೇವೆ, ಈಗ ಸುಮ್ಮನೇ ಕುಳಿತುಕೋ” ಎಂದು ಹೇಳಿದರೆಂದು ಅರ್ಥೈಸಿಕೊಂಡ.

ಪೊಲೀಸ್ ಸ್ಟೇಶನ್ನಿಗೆ ಹೋದಕೂಡಲೇ ಈತನಲ್ಲಿದ್ದ ವರ್ಕ್‌ಪರ್ಮಿಟ್ಟನ್ನು ಮೊದಲು ಪರಿಶೀಲಿಸಿ ನಂತರ ಕಣ್ಣು ಗುಡ್ಡೆಗಳನ್ನೂ, ಅಂಗೈಯನ್ನೂ ಸ್ಕ್ಯಾನ್ ಮಾಡಿ, ನೇರ ಒಳಗಿನ ಕೋಣೆಗೆ ಕರೆದೊಯ್ದು ಅಲ್ಲೇ ಮೂಲೆಯಲ್ಲಿದ್ದ ಬೆಂಚಿನ ಮೇಲೆ ಕುಳ್ಳರಿಸಿ ‘ಇಲ್ಲೇ ಕುಳಿತಿರು’ ಎಂದು ಹೊರಟು ಹೋದರು. ಅದು ಹೆಚ್ಚು ಕಮ್ಮಿ ಖಾಲೀ ಕೋಣೆಯೇ. ಅದರ ಇನ್ನೊಂದು ತುದಿಯಲ್ಲಿ ಪೊಲೀಸನೊಬ್ಬ ಎತ್ತರದ ಟೇಬಲ್ಲಿನ ಹಿಂದೆ ಕುಳಿತಿದ್ದ. ಈ ಕಡೆಯಿಂದ ನೋಡಿದರೆ ಆತನ ಮುಖವಷ್ಟೇ ಕಾಣುತ್ತಿತ್ತು. ಗೋಡೆಯ ಮೇಲೆ ಓಮಾನಿನ ರಾಜ, ದೇಶದ ಧ್ವಜ, ಪ್ರಕೃತಿಯ